ಓ.ಎಸ್ಃ 460 /2013

ಪಿ. ಡಬ್ಲ್ಯೂ ಃ 02

**<u>ಸಾಕ್ಷಿಗೆ ದಿನಾಂಕ 12.02.2018 ರಂದು ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ಪ್ರತಿವಾದಿ ಪರ ವಿ.ಪಿ ವಕೀಲರಿಂದ ಬಿ.ಎಸ್.ಎ ಪರವಾಗಿ</u>**

ವಾದಿ ನಮ್ಮ ಗ್ರಾಮದವರಾಗಿದ್ದು ಪರಿಚಯವಿದ್ದಾರೆ. ಸಂಬಂಧಿಕರಲ್ಲ. ವಾದಿ ಸೈಟ್ ನ ವಿಚಾರವಾಗಿ ಪ್ರತಿವಾದಿ ವಿರುದ್ದ ದಾವೆ ಸಲ್ಲಿಸಿದ್ದಾರೆ. ಸದರಿ ನಿವೇಶನ ವಾದಿಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ. ನಾನು ಆ ಬಗ್ಗೆ ಪಂಚಾಯಿತಿ ಖಾತೆಯ ದಾಖಲೆಗಳನ್ನು ನೋಡಿದ್ದೇನೆ. ಸದರಿ ನಿವೇಶನ ಈಗ ಸುಬ್ಬಮ್ಮ ರವರ ಹೆಸರಿನಲ್ಲಿದೆ. ಸದರಿ ನಿವೇಶನ 37 ಇನ್ನು 40 ಅಡಿ ವಿಸ್ತೀರ್ಣ ವಿದೆ. ಸದರಿ ನಿವೇಶನದಿಂದ ನನ್ನ ಮನೆ ಸುಮಾರು ಮುಕ್ಕಾಲು ಕಿ.ಮೀ ಇದೆ ಎಂದರೆ ಸರಿಯಲ್ಲ. ಒಂದು ಇನ್ನೂರು ಮೀಟರ್ ಇರಬಹುದು. ಸದರಿ ನಿವೇಶನದ ಪೂರ್ವಕ್ಕೆ ರಮೇಶ್ ರವರ ಮನೆ , ಪ.ಕ್ಕೆ ಸುಬ್ಬಮ್ಮ ನವರ ಖಾಲಿ ಜಾಗ , ಉ.ಕ್ಕೆ ರಸ್ತೆ , ದ.ಕ್ಕೆ ಸ್ವಾಮಿಗೌಡ ರ ಜಾಗ ಇದೆ. ದಾವಾ ಅನುಸೂಚಿ ಆಸ್ತಿಯಲ್ಲಿ ವಾದಿ ಯಾವತ್ತೂ ಸ್ವಾಧೀನದಲ್ಲಿ ಇಲ್ಲ ಪ್ರತಿವಾದಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ನನಗೆ ದಾವೆಯ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದರು ನೀಡಲಾಯಿತು.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಓ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ